


International Journal of Kannada Research
www.kannadajournal.com

ISSN: 2454–5813
IJKR 2019; 5(4): 132-135
© 2019 IJKR
www.kannadajournal.com
Received: 01-08-2019
Accepted: 03-09-2019

**ರವಿ ಬ ಹಾದಿಮನಿ**
ಸಹಾಯಕ ಪ್ರಾಧ್ಯಾಪಕರು,
ಸರಕಾರಿ ಪ್ರಥಮ ದರ್ಜೆ ಕಾಲೇಜು,
ಕುಷ್ಟಗಿ ಕೊಪ್ಪಳ ಜಿಲ್ಲೆ 583277
ಕರ್ನಾಟಕ

**Corresponding Author:**
**ರವಿ ಬ ಹಾದಿಮನಿ**
ಸಹಾಯಕ ಪ್ರಾಧ್ಯಾಪಕರು,
ಸರಕಾರಿ ಪ್ರಥಮ ದರ್ಜೆ ಕಾಲೇಜು,
ಕುಷ್ಟಗಿ ಕೊಪ್ಪಳ ಜಿಲ್ಲೆ 583277
ಕರ್ನಾಟಕ

# ಚಂದ್ರ ಕಲಾಕುಂಜ

**ರವಿ ಬ ಹಾದಿಮನಿ**

ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕಿನ ಸುಪ್ರಸಿದ್ಧ ನಗರ, ನೇಕಾರರ ಊರು, ಸೀರೆಗೆ ಪ್ರಸಿದ್ಧವಾದ, ಗ್ರಾನೈಟ್ ಕಲ್ಲಿನಿಂದ ಜಗತ್ತಿನಲ್ಲಿ ಹೆಸರುವಾಸಿಯಾದ ಇಲಕಲ್ಲಿನಲ್ಲಿ; ನೇಕಾರಿಕೆಯನ್ನೇ ಉದ್ಯೋಗವನ್ನಾಗಿಸಿಕೊಂಡು ಬಡತನದ ಕರಿ ನೆರಳಿನಲ್ಲಿ ಬದುಕುತ್ತಿದ್ದ ಕುಟುಂಬವದು. ದತ್ತಾತ್ರೇಯ ಮನೆಯ ಯಜಮಾನ. ಬಡವರಿಗೆ ಮಕ್ಕಳು ಹೆಚ್ಚು ಎಂಬ ಮಾತಿನಂತೆ, ಈ ಯಜಮಾನನಿಗೆ ಒಂದು ಹೆಣ್ಣು, ನಾಲ್ಕು ಗಂಡು ಮಕ್ಕಳು. ಹೀಗೆ ದೊಡ್ಡ ಕುಟುಂಬದ ಭಾರದ ನೊಗ ಹೆಗಲಮೇಲಿತ್ತು.

ಇವರ ಮೂರನೇ ಮಗನನ್ನು ಇಲಕಲ್ಲಿನ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ನಂ.೧೦ ಶಾಲೆಗೆ ಸೇರಿಸಿ, ಅವನ ಓದು ಮುಂದುವರೆಸಿದರು. ಈ ಹುಡುಗ ಚಿತ್ರಕಲೆಯಲ್ಲಿ ಚಿಕ್ಕವನಿದ್ದಾಗಲೇ ಆಸಕ್ತಿಯನ್ನು ಬೆಳಸಿಕೊಂಡು; ಮನೆಯ ಹಾಗೂ ಶಾಲೆಯ ಗೋಡೆಯ ಮೇಲೆ, ಪಠ್ಯಪುಸ್ತಕದಲ್ಲಿರುವ ಚಿತ್ರಗಳನ್ನು ತನಗೆ ತೋಚಿದ ರೀತಿಯಲ್ಲಿ ಅಂದವಾಗಿ ಚಿತ್ರಿಸುವುದರ ಜೊತೆಗೆ; ತನ್ನ ಮನಸ್ಸನ್ನು ಆಕರ್ಷಿಸಿದ ಪದಪುಂಜಗಳನ್ನು ನಾನಾ ನಮೂನೆಗಳಲ್ಲಿ ಬರೆದು, ಅದನ್ನು ಗೋಡೆಗೆ ನೇತು ಹಾಕಿ, ಕೊಠಡಿಯನ್ನು ಅಂದ-ಚಂದವಾಗಿ ಓರಣಗೊಳಿಸಿ, ಮನಸ್ಸೆಳೆಯುವಂತೆ ಮಾಡಿದಾಗ ಮಾತ್ರ ಇವನಿಗೆ ಸಮಾಧಾನ.

ಒಂದು ಬಾರಿ ಈ ಶಾಲೆಗೆ ಕ್ಷೇತ್ರಶಿಕ್ಷಣಾಧಿಕಾರಿಗಳು ಭೇಟಿ ನೀಡಿದಾಗ, ಶಾಲಾ ಕೊಠಡಿಯಲ್ಲಿರುವ ಚಿತ್ರಪಟಗಳನ್ನು, ಗೋಡೆಯ ಬರಹಗಳನ್ನು ನೋಡಿ ಸಂತಸದಿಂದ ಯಾವ ಶಿಕ್ಷಕರು ಈ ರೀತಿ ಶ್ಲಾಘನೀಯ ಕಾರ್ಯ ಮಾಡಿದವರೆಂದು ಕೇಳಿದಾಗ? ಅಲ್ಲಿದ್ದ ಶಿಕ್ಷಕರೊರ್ವರು ‘‘ಇಲ್ಲಾ ಸರ್, ಇದು ಶಿಕ್ಷಕರ ಚಮತ್ಕಾರವಲ್ಲ; ನಮ್ಮ ಶಾಲೆಯ ವಿದ್ಯಾರ್ಥಿಯೊರ್ವನ ಕಾರ್ಯ’’ವೆಂದು ಹೇಳಿದಾಗ, ಅಧಿಕಾರಿಗಳು ಆಶ್ಚರ್ಯಚಕಿತರಾಗಿ ಹೌದಾ! ಆಗಾದರೆ ಅವನೆಲ್ಲಿ? ಎಂದು ಕೇಳಿದಾಗ ವಿದ್ಯಾರ್ಥಿಯನ್ನು ಕರೆದು ಶಬ್ಬಾಷ್ ಎಂದು ಬೆನ್ನು ತಟ್ಟಿದರು. ಆ ಹುಡುಗ ಉತ್ಸಾಹಗೊಂಡು ತಾನು ಪುಸ್ತಕದಲ್ಲಿ ಬಿಡಿಸಿದ ಇನ್ನಷ್ಟು ಚಿತ್ರಗಳನ್ನು ತೋರಿಸಿದಾಗ ಹುಡುಗನ ಕಲಾರಾಧನೆಯನ್ನು ಕಂಡು ಮೂಕವಿಸ್ಮಿತರಾದರು.

ಅಧಿಕಾರಿಗಳಿಂದ ಭೇಷ್ ಎನಿಸಿಕೊಂಡ ತನ್ನ ವಿದ್ಯಾರ್ಥಿಯನ್ನು ಕಂಡು ತೋಟಗೇರಿ ಗುರುಗಳು ಇವನ ಚಿತ್ರಕಲೆಯನ್ನು ಪ್ರೋತ್ಸಾಹಿಸಿ ಸಹಾಯ-ಸಹಕಾರ ನೀಡತೊಡಗಿದರು. ಇದರ ಫಲವಾಗಿ ಚಿತ್ರಕಲೆಯನ್ನೇ ತನ್ನ ಆರಾಧ್ಯದೈವವೆಂದು ಅರಿತು ಕಲೆಯಲ್ಲಿ ನಿರತನಾಗತೊಡಗಿದ.ಪ್ರಾಥಮಿಕ ಶಾಲೆಯನ್ನು ಯಶಸ್ವಿಯಾಗಿ ಪೂರೈಸಿ, ಪ್ರೌಢ ಶಿಕ್ಷಣವನ್ನು ಸ್ಥಳೀಯ ಸರಕಾರಿ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಪ್ರವೇಶ ಪಡೆದು, ಅಲ್ಲಿಯೂ ಕೂಡ ಚಿತ್ರಕಲೆಯನ್ನು ಆರಾಧಿಸತೊಡಗಿದ. ಒಂದು ದಿನ ಪ್ರೌಢ ಶಾಲೆಯ ಕನ್ನಡ ಭಾಷಾ ಶಿಕ್ಷಕರಾದ ಶ್ರೀ ಆರ್.ಆರ್. ಸಂದಿಮನಿ ಗುರುಗಳು ತರಗತಿಯಲ್ಲಿರುವ ಎಲ್ಲಾ ವಿದ್ಯಾರ್ಥಿಗಳ ಕನ್ನಡ ಫೇರ್ ನೋಡುವಾಗ ಕೆಲವು ವಿದ್ಯಾರ್ಥಿಗಳ ಅಂದವಾದ ಬರವಣಿಗೆಯನ್ನು ಕಂಡು ಮೆಚ್ಚುಗೆಯ ಮಾತುಗಳನ್ನಾಡುತ್ತಿದ್ದರು. ಗುರುಗಳ ಮೆಚ್ಚುಗೆಯ ಮಾತುಗಳಿಗೆ ನಮಗಿಂತಲೂ ನಮ್ಮ ಗೆಳೆಯನ ಫೇರ್ ತುಂಬಾ ಆಕರ್ಷಕವಾಗಿ, ಅಂದವಾಗಿ ಬರೆಯುತ್ತಾನೆಂದು ಒಕ್ಕೊರಲಿನಿಂದ ಹೇಳಿದಾಗ ಯಾರಪ್ಪಾ ಅವನು? ಎಂದು ಪ್ರಶ್ನಿಸಿದಾಗ ಅಲ್ಲಿದ್ದ ಹುಡುಗರು ಅವನನ್ನು ತೋರಿಸಿ, ಅವನ ಕನ್ನಡ ಫೇರ್ ನೋಟಪುಸ್ತಕವನ್ನು ತೆಗೆದುಕೊಂಡು ತೋರಿಸಿದರು. ಗುರುಗಳು ಅವನ ನೋಟ್‌ಪುಸ್ತಕದತ್ತ ಗಮನಹರಿಸಿ, ಪುಟತಿರುವಿದಾಗ ಕನ್ನಡದ ಮೇರುಕವಿ, ಕನ್ನಡದ ವರ್ಡವರ್ಥ, ಜ್ಞಾನಪೀಠ ಪುರಸ್ಕೃತರಾದ ಕುವೆಂಪುರವರ ಭಾವಚಿತ್ರವನ್ನು ಬಿಡಿಸಿದನ್ನು ಕಂಡು ಆಶ್ಚರ್ಯಚಕಿತರಾಗಿ, ಈ ಚಿತ್ರವನ್ನು ಯಾರು ಬಿಡಿಸಿದ್ದಾರೆಂದು ಪ್ರಶ್ನೆ ಮಾಡಿದರು? ಈ ಹುಡುಗ ನಾನೇ ಸರ್ ಬಿಡಿಸಿದ್ದೆಂದು ಹೇಳಿದಾಗ ಅವರು ಸಾಧ್ಯವೇ ಇಲ್ಲ. ಇಷ್ಟು ಅಂದವಾಗಿ

ಇಷ್ಟು ಚಿಕ್ಕವಯಸ್ಸಿನಲ್ಲಿ ಬಿಡಿಸಲು ಸಾಧ್ಯವೇ? ಎಂದು ಮರುಪ್ರಶ್ನೆ ಮಾಡಿದಾಗ ತರಗತಿಯ ಎಲ್ಲಾ ವಿದ್ಯಾರ್ಥಿಗಳು ಹೌದು ಸಾರ್ ಅವನೇ ಬಿಡಿಸಿದ್ದೆಂದು ಹೇಳಿದಾಗ, ಈ ಹುಡುಗನ ಇನ್ನುಳಿದ ಫೇರ್‌ಗಳನ್ನು ನೋಡಿದಾಗ ವಿಜ್ಞಾನ ಫೇರ್‌ನಲ್ಲಿ ವಿಜ್ಞಾನಿಗಳ, ಸಮಾಜ ವಿಜ್ಞಾನ ನೋಟ್‌ಪುಸ್ತಕದಲ್ಲಿ ಐತಿಹಾಸಿಕ, ಸ್ವಾತಂತ್ರ್ಯ ಹೋರಾಟಗಾರರ ಭಾವಚಿತ್ರ ಒಂದೊಂದು ನೋಟ್ ಪುಸ್ತಕದಲ್ಲಿ ಒಂದೊಂದು ತರಹದ ಆಕರ್ಷಕ ಚಿತ್ರಗಳನ್ನು ಬಿಡಿಸಿದ್ದನ್ನು ಕಂಡ ಗುರುಗಳು, ತಮ್ಮ ಸಹದ್ಯೋಗಿಯಾದ ಚಿತ್ರಕಲಾ ಶಿಕ್ಷಕರಾದ ಚಂದ್ರು ಬಿಜ್ಜಳರವರ ಹತ್ತಿರ ಕರೆದುಕೊಂಡು ಹೋಗಿ ‘ಇಲ್ಲಿ ನೋಡ್ರೀ ಗುರುಗಳೇ ಎಂಥ ಚಂದ ಚಿತ್ರ ತಗದಾನ’ ಅಂತಾ ಹೇಳಿ, ಹುಡುಗ ಚಿತ್ರಿಸಿದ ಕುವೆಂಪು ಚಿತ್ರ ತೋರಿಸಿ ಸಂತಸಪಟ್ಟರು.

ಮುಂದೆ, ಸಂದಿಮನಿ ಗುರುಗಳು ಇವನನ್ನೇ ತರಗತಿಯ ನಾಯಕನ್ನಾಗಿ ಮಾಡಿ, ತಮ್ಮ ವಿಷಯದ ಮನೆಗೆಲಸವನ್ನು ಇವನಿಗೆ ತೋರಿಸಿ, ಇವನಿಂದಲೇ ಸಹಿ ಮಾಡಿಸಿಕೊಳ್ಳಿರಿ. ಕೇವಲ ಮಾರ್ಗದರ್ಶಕನಾಗಿ ನಾನು ಕಾರ್ಯನಿರ್ವಹಿಸುತ್ತೇನೆಂದು ಹೇಳಿ ಈ ಹುಡುಗನಿಗೆ ತರಗತಿಯ ಜವಾಬ್ದಾರಿಯನ್ನು ಕೊಟ್ಟರು. ಹುಡುಗನಿಗೆ ವಹಿಸಿದ ಜವಾಬ್ದಾರಿಯನ್ನು ಅತ್ಯಂತ ಅಚ್ಚುಕಟ್ಟುತನದಿಂದ ತರಗತಿಯ ಕೊಠಡಿಯ ಮೇಲೆ ಕವಿಗಳ, ವಿಜ್ಞಾನಿಗಳ, ಸ್ವಾತಂತ್ರ್ಯ ಹೋರಾಟಗಾರರ, ಭಾರತ ನಕ್ಷೆ, ಕರ್ನಾಟಕ ನಕ್ಷೆಯ ಚಿತ್ರಪಟಗಳನ್ನು ಬಿಡಿಸಿ, ಗೋಡೆಯ ಮೊಳೆಗಳಿಗೆ ತೂಗು ಹಾಕಿ, ಗಾದೆಮಾತುಗಳನ್ನು, ಸುಪ್ರಸಿದ್ಧ ವ್ಯಕ್ತಿಗಳ ಹೇಳಿಕೆಗಳನ್ನು ಗೋಡೆಯ ಮೇಲೆ ಬರೆದು ಅಂದವಾಗಿ, ಆಕರ್ಷಕವಾಗಿ ಮಾಡಿ ಗುರುಗಳಿಂದ ಮೆಚ್ಚಿಗೆ ಪಡೆದು, ನೆಚ್ಚಿನ ವಿದ್ಯಾರ್ಥಿಯಾದ.

ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ತೇರ್ಗಡೆಯಾದ ಮೇಲೆ ಸಂದಿಮನಿ ಗುರುಗಳು ಹಾಗೂ ಚಿತ್ರಕಲಾ ಶಿಕ್ಷಕರಾದ ಚಂದ್ರು ಬಿಜ್ಜಳ ಗುರುಗಳು ಈ ಹುಡುಗನನ್ನು ಕರೆದು ನೀನು ಕಲೆಯನ್ನು ಮುಂದುವರೆಸು, ಇದರಲ್ಲಿಯೇ ಸಾಧನೆ ಮಾಡು ಎಂದು ಮಾರ್ಗದರ್ಶನ ಮಾಡಿ ಪ್ರೋತ್ಸಾಹಿಸಿದರು.

ಆದರೆ ಪ್ರೌಢ ಶಾಲೆಗೆ ಸೇರಿದ ತರುವಾಯ ಇವರ ಕುಟುಂಬಕ್ಕೆ ಪರಿಚಿತರಾದ ವೈದ್ಯರ ಬಳಿ, ಸಣ್ಣ-ಪುಟ್ಟ ಕೆಲಸಕಾರ್ಯಗಳಲ್ಲಿ ಸಹಾಯಕನಾಗಿ ಇರುವಂತೆ ಹೇಳಿ ಕಳಿಸುತ್ತಿದ್ದರು. ಅದೇ ರೀತಿ ಹುಡುಗನು ಕೂಡ ಅಲ್ಲಿ ವೈದ್ಯರು ಹೇಳಿದ ಕೆಲಸ ಮಾಡುತ್ತಿದ್ದರೂ ಕಲೆಯ ಕನಸನ್ನು ಕಾಣುವುದನ್ನು ಮರೆಯುತ್ತಿರಲಿಲ್ಲ.ಇವನ ಮನದಲ್ಲಿ ವೈದ್ಯನಾಗಬೇಕೆಂಬ ಆಸೆಯು ಕಿಂಚಿತ್ತೂ ಬರಲಿಲ್ಲ. ಆದರೆ ಇವನು ಎಸ್.ಎಸ್.ಎಲ್.ಸಿ ಯಲ್ಲಿ ಪ್ರಥಮದರ್ಜೆಯಲ್ಲಿ ಉತ್ತೀರ್ಣನಾದ ಮೇಲೆ ಮನೆಯಲ್ಲಿ ತಂದೆಯನ್ನು ಹೊರತುಪಡಿಸಿ, ತಾಯಿ ಹಾಗೂ ಸಹೋದರಿ,ಸಹೋದರರು ನೀನು ಮುಂದೆ ಪಿಯುನಲ್ಲಿ ವಿಜ್ಞಾನ ತೆಗೆದುಕೊಂಡು ಓದಿ, ಡಾಕ್ಟರ್ ಆಗಬೇಕೆಂದು ಒತ್ತಾಯ ಮಾಡಿದರು. ಆದರೆ ಇವನಿಗೆ ವೈದ್ಯವೃತ್ತಿ ಸರಿಯೆನಿಸದೆ ತಾನು ಕಲೆಯಲ್ಲಿಯೇ ಮುಂದುವರೆಯುತ್ತೇನೆಂದು ಹಠಹಿಡಿದಾಗ ಕುಟುಂಬದವರ ನಿಂದನೆಗಳನ್ನು ಸಹಿಸಿಕೊಳ್ಳಬೇಕಾಯಿತು. ಮತ್ತು ತನ್ನ ಕಲಾರಾಧನೆಗೆ ಅಡ್ಡಿಯುಂಟು ಮಾಡುವ, ವೈದ್ಯರ ಬಳಿ ಹೋಗುತ್ತಿದ್ದ ಕೆಲಸಕ್ಕೆ ಎಳ್ಳು-ನೀರು ಬಿಟ್ಟ.

ಈ ಹುಡುಗನಿಗೆ ಚಿತ್ರಕಲೆಯ ಮೇಲಿನ ಹುಚ್ಚು ಎಷ್ಟಿತ್ತೆಂದರೆ, ಕಲಾ ಶಾಲೆಯ ಒಂದನೇ ವರ್ಷದಲ್ಲಿಯೇ ಗದುಗಿಗೆ ಹೋಗಿ ಅಲ್ಲಿ, ಬಣ್ಣ, ಬ್ರಶ್‌ಗಳನ್ನು, ಪೇಪರ್ ಇನ್ನೂ ಮುಂತಾದ ಸಾಮಗ್ರಿಗಳನ್ನು ಖರೀದಿಸಿ ಮಹಾವಿದ್ಯಾಲಕ್ಕೆ ಬಂದನು. ಇಲ್ಲಿ ಶ್ರೀ ಎಸ್.ಎನ್. ಪೋಚಗುಂಡಿ ಹಾಗೂ ಶ್ರೀ ಕಾಸೀಮ್ ಕನಸಾವಿ ಚಿತ್ರಕಲಾ ಶಿಕ್ಷಕರಿರ್ವರ ಮಾರ್ಗದರ್ಶನದಲ್ಲಿ ತಪಸ್ಸಿನ ರೀತಿಯಲ್ಲಿ ಅಧ್ಯಯನ ಮುಂದುವರೆಸಿದನು. ಆದರೆ ಈ ಕಾಲೇಜಿನಲ್ಲಿ ಮೂಲಭೂತ ಸೌಕರ್ಯಗಳು ಇಲ್ಲದ್ದರಿಂದ ಚಿತ್ರಕಲೆಗೆ ಸಂಬಂಧಿಸಿದ ವಸ್ತುಗಳನ್ನು ಖರೀದಿಸಲು ಗದಗ ಪಟ್ಟಣಕ್ಕೆ ಹೋದಾಗ, ಅಲ್ಲಿಯ ಚಿತ್ರಕಲಾ ಮಂದಿರದಲ್ಲಿ ಗೆಳೆಯರ ಪರಿಚಯದಿಂದ, ಈ ಕಾಲೇಜಿನಲ್ಲಿ ನಡೆಯುವ ತರಬೇತಿಗಳಲ್ಲಿ, ತರಗತಿಗಳಲ್ಲಿ ಭಾಗವಹಿಸುತ್ತ ಕಲೆಯ ವಿವಿಧ ಆಯಾಮಗಳನ್ನು ಆಸಕ್ತಿಯಿಂದ ಅರಿತುಕೊಳ್ಳುತ್ತ, ಅವುಗಳ ಅನುಕರಣೆ ಮಾಡುತ್ತಿದ್ದನು. ಇವನ ಕಲಾಪ್ರೇಮವನ್ನು ಅಲ್ಲಿಯ ಶಿಕ್ಷಕರು, ನೀನು ನಮ್ಮ ಮಹಾವಿದ್ಯಾಲಯದಲ್ಲಿಯೇ ಅಭ್ಯಾಸ ಮಾಡು, ಇಲಕಲ್ಲಿನ ನಿನ್ನ ಕಾಲೇಜಿನಿಂದ ವರ್ಗಾವಣೆ ಪತ್ರವನ್ನು ಪತ್ರಮುಖೇನ ತರಿಸಿಕೊಂಡು ಅದಕ್ಕೆ ಬೇಕಾದ ಏರ್ಪಾಡು ನಾವು ಮಾಡಿಕೊಡುತ್ತೇವೆಂದು ವಸತಿ ವ್ಯವಸ್ಥೆಯನ್ನು ಅನುಕೂಲಿಸಿದರು.ಇವನು ತನ್ನ ಗೆಳೆಯರೊಡನೆ ಸೇರಿಕೊಂಡು, ಮನೆಯವರು ಕಳಿಸಿದ ಚೂರುಪಾರು ಹಣದಲ್ಲಿ ಅಕ್ಕಿ-ಬೇಳೆ ಖರೀದಿಸಿ ರೂಮಿನಲ್ಲಿಯೇ ಅಡುಗೆ ಮಾಡಿಕೊಂಡು, ಕಲೆಯಲ್ಲಿ ತಲ್ಲಿನನಾಗುತ್ತಾ ಅಭ್ಯಾಸ ಮಾಡುತ್ತಿದ್ದರು. ಆದರೆ ಗದಗದಿಂದ ಇಲಕಲ್ಲಿನ ಕಾಲೇಜಿಗೆ ಈ ಹುಡುಗ ವರ್ಗಾವಣೆ ಪತ್ರ ಕಳಿಸಿಕೊಡಿ ಎಂದು ಎರಡು-ಮೂರು ಬಾರಿ ಪತ್ರ ಹಾಕಿದರೂ ಒಂದೂ ಉತ್ತರ ಬರಲಿಲ್ಲ. ಕೊನೆಗೆ ಹುಡುಗನೆ ಬಂದು ಕೇಳಿದರೂ ಇವನನ್ನು ಬಿಟ್ಟುಕೊಡಲು ಕಾಲೇಜಿನ ಪ್ರಾಚಾರ್ಯರು ಒಪ್ಪದಿದ್ದರಿಂದ ಅನಿವಾರ್ಯವಾಗಿ ಇಲಕಲ್ಲಿನಲ್ಲಿಯೇ ಕಲಾಭ್ಯಾಸವನ್ನು ಮುಂದುವರೆಸಿ ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆದು, ಕಾಲೇಜಿಗೆ ಕುಟುಂಬಕ್ಕೆ ಕೀರ್ತಿ ತಂದನು.

ಕಾಲೇಜಿನಲ್ಲಿ ಕಲಿಕೆಯನ್ನು ಮುಂದುವರೆಸುತ್ತಾ, ಕಲಾಕೃತಿಗಳು, ಕ್ಲಾಸ್‌ವರ್ಕಗಳು, ಬಸ್‌ಸ್ಟ್ಯಾಂಡ್ ಸ್ಕೇಚ್ ಇನ್ನು ಮುಂತಾದ ಚಿತ್ರಗಳನ್ನು ಬಿಡಿಸುತ್ತಾ, ಪ್ರಾಚಾರ್ಯರಾದ ಬಸವರಾಜ ಗವಿಮಠ ಗುರುಗಳ ಜೊತೆಗೂಡಿ, ಕಮರ್ಷಿಯಲ್ ವರ್ಕ್‌ನ್ನು ಮಾಡುತ್ತಾ ಡಿ.ಎಂ.ಸಿ. ಕೋರ್ಸಿನ ಎರಡನೇ ವರ್ಷದಲ್ಲಿ ರಾಜ್ಯಕ್ಕೆ ದ್ವಿತೀಯ ರ್‍ಯಾಂಕ್ ಗಳಿಸಿ, ಕಲಾ ಮಹಾವಿದ್ಯಾಲಯದ ಕೀರ್ತಿಯನ್ನು ಹೆಚ್ಚಿಸಿ, ಕುಟುಂಬಕ್ಕೆ, ಊರಿಗೆ ಗೌರವವನ್ನು ತಂದು ಎಲ್ಲರ ಮೆಚ್ಚುಗೆಗೆ ಪಾತ್ರನಾದನು. ಈ ಹುಡುಗನೇ, ಕಲೆಯನ್ನೇ ತನ್ನ ಬದುಕೆಂದು, ನಿರಂತರ ಕಲಾ ಚಿಂತನೆಯಲ್ಲಿ ಮಗ್ನರಾಗಿ, ಅದರಲ್ಲಿಯೇ ಸಾಧನೆಯ ಶಿಖರವೇರುತ್ತಿರುವ, ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಚಿತ್ರಕಲಾ ಶಿಕ್ಷಕರಾದ ಚಂದ್ರಕಾಂತ.ದತ್ತಪ್ಪ.ಸರೋದೆ.

ಸಾಂಸ್ಕೃತಿಕ ನಗರಿಯಾದ ಧಾರವಾಡ ಜಿಲ್ಲೆಯ ಹುಬ್ಬಳ್ಳಿ ಶಹರನಲ್ಲಿ ಸಂವಿಧಾನಶಿಲ್ಪಿ ಜನಿಸಿದ ದಿನವಾದ ೧೪.೦೪.೧೯೮೦ ಕಲಾರಾಧಕರಾದ ಶ್ರೀ ಚಂದ್ರಕಾಂತ ಸರೋದೆಯವರು ಜನಿಸಿದರು. ನೇಕಾರಿಕೆಯನ್ನೇ ನಂಬಿದ ಕುಟುಂಬದ ಯಜಮಾನನಾದ ದತ್ತಪ್ಪನವರು ತನ್ನ ಸ್ವಂತ ಊರಾದ ಇಲಕಲ್ಲ ಶಹರನ ಪುರಸಭೆಯಲ್ಲಿ ಸರಕಾರಿ ನೌಕರರಾಗಿ ಸೇವೆ ಸಲ್ಲಿಸುತ್ತಿದ್ದರು. ತಮ್ಮ ಐದು ಮಕ್ಕಳಿಗೆ ಸರಿಯಾದ ಶಿಕ್ಷಣ ನೀಡುವುದರ ಜೊತೆಗೆ ' ಅವರವರ ಅಭಿರುಚಿಗೆ ತಕ್ಕಂತೆ ಬೆಳೆಯಲು ಪ್ರೋತ್ಸಾಹಿಸಿದರು. ಇದರಿಂದಲೇ ಚಂದ್ರಕಾಂತರವರು ಕಲಾರಾಧಕರಾಗಿ ಬೆಳೆಯಲು ಸಾಧ್ಯವಾಯಿತು. ಸಮಾಜದಲ್ಲಿ ಕಲೆಗೆ ತಾತ್ಸಾರದ ಮನೋಭಾವನೆಯುಳ್ಳ ಮನಸ್ಸುಗಳು ಬಹುಸಂಖ್ಯಾತರಿರುವಾಗ' ದತ್ತಪ್ಪನವರು ಮಾತ್ರ ಮಗನ ಆಸಕ್ತಿಗನುಗುಣವಾಗಿ ಸ್ವಾತಂತ್ರ್ಯ ನೀಡಿದ್ದರ ಫಲವಾಗಿ ಒಂದು ಅದ್ಭುತ ಪ್ರತಿಭೆ ಅರಳಲು ಸಾಧ್ಯವಾಯಿತು. ಇಲ್ಲವಾದರೆ ಚಂದ್ರಕಾಂತರ ಕಲೆಯು, ಅಮವಾಸ್ಯೆಯಂದು ಚಂದ್ರನಿಲ್ಲದ ಆಕಾಶದಂತಾಗಿ, ಕಲೆಯ ಆಸೆ ಕಮರಿ ಹೋಗುತ್ತಿತ್ತೇನೋ?.

ಚಂದ್ರಕಾಂತ ಪ್ರಾಥಮಿಕ ವಿದ್ಯಾರ್ಥಿಯಾಗಿದ್ದಾಗಲೇ ಪಠ್ಯಪುಸ್ತಕದಲ್ಲಿಯ ಚಿತ್ರಗಳನ್ನು ಬಿಡಿಸುತ್ತಿದ್ದರು. ಇದಲ್ಲದೆ ನಾಗರ ಪಂಚಮಿಯಲ್ಲಿ ಮಣ್ಣಿನ ನಾಗರ, ಕಾರಹುಣ್ಣಿಮೆಯಲ್ಲಿ ಮಣ್ಣಿನ ಎತ್ತುಗಳನ್ನು ತಯಾರಿಸಿ ಮಾರುತ್ತಿದ್ದರು. ಹೀಗೆ ಚಿಕ್ಕವಯಸ್ಸಿನಲ್ಲಿಯೇ ಕಲಾ ಜೀವನ ಪ್ರಾರಂಭಿಸಿ, ಬೆಳೆಯುವ ಸಿರಿ ಮೊಳಕೆಯಲ್ಲಿ ಎನ್ನುವಂತೆ ಶ್ರೇಷ್ಠ ಕಲಾರಾಧಕರಾದರು.

ಇಲಕಲ್ಲಿನ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಪ್ರೌಢ ಶಾಲಾ ವಿದ್ಯಾರ್ಥಿಯಾಗಿರುವಾಗ ಅಲ್ಲಿಯ ಚಿತ್ರಕಲಾ ಶಿಕ್ಷಕರಾದ ಚಂದ್ರು ಬಿಜ್ಜಳ ಗುರುಗಳ ಪ್ರೋತ್ಸಾಹ ಸಿಕ್ಕಿತು. ಈ ಗುರುಗಳು ಹಾಕುತ್ತಿದ್ದ ಬ್ಲಾಕ್ ಬೋಲ್ಡ ಸ್ಕೇಚ್, ಪುಸ್ತಕದಲ್ಲಿರುವ ಸ್ಕೇಚ್‌ಗಳು, ರೇಖೆಗಳು, ಅವರು ಬಳಸುತ್ತಿದ್ದ ಜಲವರ್ಣಗಳಿಂದ ಸಾಕಷ್ಟು ಪ್ರಭಾವಕ್ಕೊಳಗಾದ ಚಂದ್ರಕಾಂತ್, ಗುರುಗಳ ಪ್ರತಿಯೊಂದು ಚಿತ್ರಗಳನ್ನು ನಕಲು ಮಾಡಿ ಅವರ ಮೆಚ್ಚುಗೆಗೆ ಪಾತ್ರನಾಗುತ್ತಿದ್ದ.

ಪ್ರೌಢಶಾಲೆಯಲ್ಲಿ ಚಿತ್ರಕಲೆಯ ಪರೀಕ್ಷೆಗಳಾದ ಲೋವರ್ ಗ್ರೇಡ್, ಹೈಯರ್ ಗ್ರೇಡ್ ಪರೀಕ್ಷೆಗೆ ಕುಳಿತು, ಅಲ್ಲಿ ವಸ್ತುಚಿತ್ರಣ, ನಿಸರ್ಗ, ಭೂಮಿತಿ, ಸರಳಗ್ಯೆ ಚಿತ್ರ ಇನ್ನೂ ಮುಂತಾದ ವಿಷಯಗಳ ಸಂಪೂರ್ಣ ಪರಿಚಯ ಮಾಡಿಕೊಂಡರು. ಪ್ರಥಮ ಚಿತ್ರಕಲಾ ಪರೀಕ್ಷೆಯಲ್ಲಿಯೇ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದರು.

ಕಲಾ ಶಾಲೆಯಲ್ಲಿ ನಡೆಸುತ್ತಿರುವ ತರಗತಿಗಳನ್ನು, ಬಿಡಿಸಿದ ಚಿತ್ರಗಳನ್ನು ನೋಡಲು ಚಿತ್ರಕಲಾ ಶಾಲೆಗೆ ಹೋಗುತ್ತಿದ್ದರು. ಕಲಾ ಕಾಲೇಜಿನ ಪ್ರತಿಯೊಂದು ಸ್ಪರ್ಧೆಯಲ್ಲಿ ಭಾಗವಹಿಸಿ, ಪ್ರಥಮ ಬಹುಮಾನ ತನಗೆ ಎನ್ನುವಷ್ಟರ ಮಟ್ಟಿಗೆ ಕಲೆಯಲ್ಲಿ ತಲ್ಲಿನರಾಗಿ ಚಿತ್ರಗಳನ್ನು ಬಿಡಿಸಿ ಯಶಸ್ಸು ಗಳಿಸುತ್ತಿದ್ದರು.

ತಂದೆಯವರ ಅಕಾಲಿಕ ಮರಣದಿಂದಾಗಿ ಕುಟುಂಬದ ಆರ್ಥಿಕ ಪರಸ್ಥಿತಿ ಚಿಂತಾಜನಕವಾಯಿತು. ಚಂದ್ರಕಾಂತರು ಕಲಾ ಮಹಾವಿದ್ಯಾಲಯದಲ್ಲಿಯೇ ಅಭ್ಯಾಸ ಮಾಡುತ್ತಾ, ವಿಜಯ ಚಿತ್ರಕಲಾ ಕಾಲೇಜಿನಲ್ಲಿ ಆಶ್ರಯ ಪಡೆದು, ಊರಿನ, ಸುತ್ತಮುತ್ತಲಿನ ಊರಿನ ಜನರಿಗೆ ಬೇಕಾದ ಕಲಾಕೃತಿಗಳನ್ನು, ಕಲಾವಸ್ತುಗಳನ್ನು ರಚಿಸಿ, ಅವುಗಳನ್ನು ಮಾರಿ, ಅದರಿಂದ ಬಂದ ಹಣದಲ್ಲಿ ತಮ್ಮ ಕಲಾಭ್ಯಾಸ ಮುಂದುವರೆಸುತ್ತಾ, ಮನೆಯ ದುಡಿಮೆಯಲ್ಲಿ ಸಹೋದರರಿಗೆ ನೆರವಾಗುತ್ತಾ ಬದುಕು ಸಾಗಿಸುತ್ತಿದ್ದರು.

ಶಾಲೆಯಲ್ಲಿ ಆದರ್ಶ ವಿದ್ಯಾರ್ಥಿಯಾಗಿ ಬೆಳೆಯುತ್ತ, ತಮ್ಮ ದೈನಂದಿನ ಬದುಕಿನ ಚಿತ್ರಣ, ಸುತ್ತಮುತ್ತಲಿನ ಪರಿಸರವನ್ನು ತಮ್ಮದೆಯಾದ ಕಲಾದೃಷ್ಟಿಯಿಂದ ವೀಕ್ಷಿಸಿ, ಅದನ್ನು ಕಲಾಕೃತಿಗಳಾಗಿ ಹೊರಹೊಮ್ಮಿಸಿ ತಮ್ಮ ಭಾವನೆಗಳನ್ನು ಹೊರಹಾಕುತ್ತಿದ್ದರು. ಶಿಕ್ಷಕರ ಗಮನವನ್ನು ಬಹುಬೇಗನೆ ಸೆಳೆದು ಅಚ್ಚುಮೆಚ್ಚಿನ ವಿದ್ಯಾರ್ಥಿಯಾಗುವಲ್ಲಿ ಸಫಲರಾಗಿದ್ದರು.

ವಿದ್ಯಾರ್ಥಿ ಜೀವನದಿಂದ ಇಂದಿನವರೆಗೂ ಸರೋದೆಯವರು ತಮ್ಮ ಕಲಾಕೃತಿಗಳಲ್ಲಾಗಲಿ, ಪೇಪರ್ ಕಟಿಂಗ್‌ನಲ್ಲಾಗಲಿ ವಿವಿಧ ತರ-ತರನಾದ ಎಲ್ಲಾ ಶೈಲಿಯಲ್ಲಿಯೂ ಕೀಟಗಳು, ಬುದ್ಧ, ಮಹಾವೀರ, ಯಕ್ಷಗಾನದ ಮುಖ್ಯ ಹಾಗೂ ಕಣ್ಣಿಗೆ ಗೋಚರವಾಗಿದ್ದನ್ನು ತಮ್ಮ ಕಲಾಕೃತಿಗಳನ್ನು ಬಿಡಿಸುತ್ತಿದ್ದರು. ತಾವು ಕಲಿತ ಹೊಸ ಶೈಲಿ ತಂತ್ರಗಳನ್ನು ಸೃಜನಾತ್ಮಕವಾಗಿ ತಮ್ಮ ಕಲಾಕೃತಿಗಳನ್ನು ತಯಾರಿಸುತ್ತಿದ್ದರು. ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಲಾ ಬೆಳವಣಿಗೆಯನ್ನು ಸೂಕ್ಷ್ಮದೃಷ್ಟಿಯಿಂದ ತಿಳಿಯುತ್ತಾ ಚಿತ್ರ ಬಿಡಿಸುತ್ತಿದ್ದರು. ದಿನದಲ್ಲಿ ಸ್ವಲ್ಪ ಸಮಯವಾದರೂ ಬಣ್ಣಗಳ ಜೊತೆ ಮಧುರ ಕ್ಷಣಗಳನ್ನು ಕಳೆಯದೆ ಹೋದರೆ ಅಂದು ಏನೋ ಕಳೆದುಕೊಂಡ ಅನುಭವವಾಗಿ, ಮನಸ್ಸು ತಳಮಳ ಉಂಟಾಗುತ್ತದೆಂದು ಸ್ವತಃ ಚಂದ್ರಕಾಂತ ಸರೋದೆಯವರ ಮಾತು. ಅಷ್ಟು ಬಣ್ಣದ ಜೊತೆಗೆ ಅವರು ಒಡನಾಟವನ್ನು, ನಂಟನ್ನು ಇಟ್ಟುಕೊಂಡಿದ್ದಾರೆ. ಕಲೆಯೆನ್ನುವುದು ಒಂದು ದಿನಕ್ಕೆ ಆಗುವಂತದ್ದಲ್ಲ, ಕಲೆಯಲ್ಲಿ ತಾಳ್ಮೆ-ಸಹನೆ ಮುಖ್ಯವೆಂದು, ಅದು ಸಂತೋಷ-ಆನಂದಗಳನ್ನು ನೀಡುತ್ತದೆಂದು ಹೇಳುತ್ತಾರೆ. ಇವರ ಸೃಜನಶೀಲ ಕಲೆಯು ನಿತ್ಯವೂ ಹೊಸತನ ಕಾಣುತ್ತದೆ. ನವೀನರೂಪದೊಂದಿಗೆ ಸಮಕಾಲೀನ ಗುಣಗಳೊಂದಿಗೆ ಸಾಮ್ಯತೆ ಹೊಂದಿ ಹೊರಹೊಮ್ಮುತ್ತದೆ. ಇಲ್ಲಿಯವರೆಗೂ ನೂರಾರು ವರ್ಣಚಿತ್ರಗಳನ್ನು, ಸಾವಿರಾರು ರೇಖಾ ಚಿತ್ರಗಳನ್ನು ಬಿಡಿಸಿದ್ದಾರೆ. ಆದರೂ ಅವರಿಗೆ ತಮ್ಮ ಕಲೆಯಲ್ಲಿ ಇನ್ನೂ ಸಾಧಿಸಿರುವುದು ಬಹಳ ಅಲ್ಪ, ಇನ್ನೂ ಸಾಗರದಷ್ಟು ಕಲಿಯಬೇಕಾದದ್ದಿದೆ ಎಂದು ಹೇಳುತ್ತಾರೆ.

ಹಂಪಿ ವಿಶ್ವವಿದ್ಯಾಲಯದ ಶಾಖೆಗಳಲ್ಲೊಂದಾದ ಬದಾಮಿ ತಾಲೂಕಿನ ಬನಶಂಕರಿ ವಿಶ್ವವಿದ್ಯಾಲಯದಲ್ಲಿ ಬಿ.ಎಫ್.ಎ ಕೋರ್ಸ ಕೂಡ ಪೂರೈಸಿದ್ದಾರೆ. ೨೦೦೨-೦೩ ರಲ್ಲಿ ಇಲಕಲ್ಲಿನ ವಿಜಯ ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಒಂದು ವರ್ಷಕಾಲ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದಾರೆ.

**ವೃತ್ತಿ ಬದುಕು** :- ೨೦೦೫ ರ ಜುಲೈ ೧೫ ರಂದು ಪ್ರಾಥಮಿಕ ಚಿತ್ರಕಲಾ ಶಿಕ್ಷಕರಾಗಿ ನೇಮಕಗೊಂಡು, ಕೊಪ್ಪಳ ಜಿಲ್ಲೆಯ ಭತ್ತದ ನಾಡು ಗಂಗಾವತಿಯ 'ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ'ಯಲ್ಲಿ ಪ್ರಥಮ ಸೇವೆಯನ್ನು ಆರಂಭಿಸಿದರು. ಈ ಶಾಲೆಯ ಕ್ರಿಯಾಶೀಲ ಮುಖ್ಯೋಪಾಧ್ಯಾಯರಾದ ರಾಷ್ಟ್ರಪ್ರಶಸ್ತಿ ವಿಜೇತರಾದ ಶ್ರೀ ಮಲ್ಲನಗೌಡ ಗೌಡರವರ ಪ್ರಾಮಾಣಿಕತೆ, ಕಾಯಕನಿಷ್ಠೆ, ಸಮಯಪ್ರಜ್ಞೆ ಗುಣಗಳು ಸರೋದೆಯವರ ಮೇಲೆ ಗಾಢ ಪ್ರಭಾವ ಬೀರಿದವು. ಅವುಗಳನ್ನು ತಮ್ಮಲ್ಲಿ ಅಳವಡಿಸಿಕೊಂಡು ಅವರ ಮಾರ್ಗದರ್ಶನದಲ್ಲಿ ಶಾಲೆಯ ಮಕ್ಕಳನ್ನು ಚಿತ್ರಕಲೆಯಲ್ಲಿ ರಾಜ್ಯಮಟ್ಟದವರೆಗೆ ಕರೆದುಕೊಂಡು ಹೋಗುವಲ್ಲಿ ಮುಖ್ಯೋಪಾಧ್ಯಾಯರ ಪಾತ್ರ ಶ್ಲಾಘನೀಯವಾದದ್ದು. ಈ ಶಾಲೆಯ ಶಿಕ್ಷಕರು, ಎಸ್.ಡಿ.ಎಂ.ಸಿ. ಅಧ್ಯಕ್ಷರು ಹಾಗೂ ಸದಸ್ಯರು ಹಾಗೂ ವಿದ್ಯಾರ್ಥಿಗಳ ಮೆಚ್ಚಿನ ಶಿಕ್ಷಕರಾಗಿ ಕಾರ್ಯನಿರ್ವಹಿಸಿದರು.

ತರುವಾಯ, ೨೦೦೮ ಸೆಪ್ಟಂಬರ್ ೦೧ ರಂದು ಮತ್ತೊಂದು ಸಿಹಿ ಸುದ್ದಿ ಎನ್ನುವಂತೆ ಪ್ರೌಢಶಾಲಾ ಚಿತ್ರಕಲಾ ಶಿಕ್ಷಕರಾಗಿ ಆಯ್ಕೆಯಾಗಿ, ಬಾಗಲಕೋಟ ಜಿಲ್ಲೆಯ ಹುನಗುಂದ ತಾಲೂಕಿನ ಚಿಕ್ಕ ಆದಾಪೂರ ಪ್ರೌಢಶಾಲೆಯಲ್ಲಿ ಸೇವೆಗೆ ಸೇರಿ ಕಾರ್ಯನಿರ್ವಹಿಸುತ್ತಿದ್ದಾರೆ. ಇಲ್ಲಿಯೂ ಕೂಡ ತಮ್ಮ ಕಲೆಯ ಛಾಪನ್ನು ಮೂಡಿಸಿ, ಹಲವಾರು ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ, ಕಲೆಯನ್ನು ಪ್ರೀತಿಸುವ ವಿದ್ಯಾರ್ಥಿಗಳನ್ನು ಗುರುತಿಸಿ ಪ್ರೋತ್ಸಾಹಿಸುತ್ತಿದ್ದಾರೆ. ಇದಲ್ಲದೆ ೨೦೧೦ ರಲ್ಲಿ ನೂತನವಾಗಿ ಆರಂಭವಾದ ಆದರ್ಶ ವಿದ್ಯಾಲಯ (ಆರ್.ಎಂ.ಎಸ್.ಎ.) ಆಂಗ್ಲ ಮಾಧ್ಯಮ ಶಾಲೆಗೆ ವಾರದ ಮೂರು ದಿನ ನಿಯೋಜನೆಗೊಂಡು ಸೇವೆಸಲ್ಲಿಸಿದ್ದಾರೆ.

**ಕಸದಲ್ಲಿ ರಸದ ಕಲೆ** :- ವಿದ್ಯಾರ್ಥಿದೆಸೆಯಿಂದಲೇ ಹಲವು ಸೃಜನಶೀಲ ಚಟುವಟಿಕೆಗಳನ್ನು ಮೈಗೂಡಿಸಿಕೊಂಡು ಬಂದ ಸರೋದೆಯವರು ಕಸದಿಂದ ರಸ ಎನ್ನುವಂತೆ ಅನುಪಯುಕ್ತ ವಸ್ತು, ಬಣ್ಣ-ಬಣ್ಣದ ಕಾಗದಗಳಿಂದ ತಮ್ಮ ಕಲಾತ್ಮಕ ದೃಷ್ಟಿಯಲ್ಲಿ ಜಿರಲೆ, ಚೇಳು, ಹಾವು, ಕಪ್ಪೆ, ಹಲ್ಲಿ, ಪಕ್ಷಿ, ಚಿಟ್ಟೆ, ನೋಣ, ಇರುವೆ, ತಗಣಿ, ಕೀಡೆ, ಬೋರಂಗಿ ಇನ್ನೂ ಮುಂತಾದ ಕೀಟಜಗತ್ತನ್ನೇ ರಚಿಸಿ ಬಿಡುತ್ತಾರೆ.

ಮೂಲ ಸೌಲಭ್ಯಗಳಿಂದ ವಂಚಿತವಾದ ಹಳ್ಳಿಯ ತಮ್ಮ ಶಾಲೆಗೆ ಯಾರಾದರೂ ಅತಿಥಿಗಳು, ಅಧಿಕಾರಿಗಳು ಭೇಟಿ ನೀಡಿದರೆ, ಅವರಿಗೆ ಬಣ್ಣ-ಬಣ್ಣದ ಕಾಗದದಿಂದ ವಿದ್ಯಾರ್ಥಿಗಳೊಂದಿಗೆ ಸೇರಿಕೊಂಡು ಅಂದವಾದ ಹೂಗುಚ್ಚಗಳ ಆಕೃತಿಗಳನ್ನು ಮಾಡಿ ಬಂದ ಅತಿಥಿಗಳಿಗೆ ನೀಡುವುದರ ಮೂಲಕ ತಾವು ಕಲಿತ ಕಲೆಯನ್ನು ಸಾರ್ಥಕ್ಯ ಮಾಡಿಕೊಳ್ಳುತ್ತಾರೆ.ಬಂದ ಅತಿಥಿಮಹೋದಯರಿಗೂ ಮುಂದೆ ಇವರ ಕಲೆ ಅನಾವರಣಗೊಳ್ಳುತ್ತದೆ.

ಹೊಸ ವರುಷ, ದೀಪಾವಳಿ, ಯುಗಾದಿ, ದಸರಾ ಹಬ್ಬ ಇನ್ನೂ ಮುಂತಾದ ಶುಭಾಶಯಗಳ ಗ್ರೀಟಿಂಗ್ಸ್ ಪತ್ರಗಳನ್ನು ಮಾಡುವುದನ್ನು ವಿದ್ಯಾರ್ಥಿಗಳಿಗೆ ಕಲಿಸಿದ್ದರಿಂದ ಅವರು ತಮ್ಮ ಮನೆಯಲ್ಲಿರುವ ಹಳೆಯ ಬಣ್ಣದ ಕ್ಯಾಲೆಂಡರ್, ಲಗ್ನ ಪತ್ರಿಕೆಗಳು, ಇನ್ನಿತರ ಆಮಂತ್ರಣ ಪತ್ರಿಕೆಗಳನ್ನು ಆಕರ್ಷಕವಾಗಿ ಕತ್ತರಿಸಿ, ಅದರಲ್ಲಿ ಶುಭಾಶಯಗಳನ್ನು ಕೋರಿ, ಶಿಕ್ಷಕರಿಗೆ, ಅತಿಥಿಗಳಿಗೆ, ಬಂಧು-ಬಾಂಧವರಿಗೆ ನೀಡುವುದರಿಂದ ಕಸದಿಂದ ರಸವನ್ನಾಗಿಸುವುದನ್ನು ರೂಢಿಸಿಕೊಳ್ಳುವುದರೊಂದಿಗೆ, ಕಡಿಮೆ ಖರ್ಚಿನಲ್ಲಿ ಅಂದವಾದ ಆಕೃತಿಯನ್ನು ರೂಪಿಸುವುದನ್ನು ಕರಗತಮಾಡಿಕೊಂಡಿದ್ದಾರೆ.

ಶಾಲೆಯನ್ನು ಅಂದವಾಗಿ ಓರಣಗೊಳಿಸುವಲ್ಲಿ ಚಂದ್ರಕಾಂತ ಸರೋದೆಯವರ ಪಾತ್ರ ಅನನ್ಯವಾದದ್ದು. ಶಾಲಾ ವೇಳಾ ಪತ್ರಿಕೆ, ಶಿಕ್ಷಕರ ಮಾಹಿತಿ, ವಿದ್ಯಾರ್ಥಿಗಳ ಮಾಹಿತಿ, ಶಾಲಾ ಸಂಸತ್ತಿನ ಫಲಕ ಇನ್ನೂ ಮುಂತಾದ ಶಾಲೆಯಲ್ಲಿರುವ ಫಲಕಗಳನ್ನು ತಮ್ಮ ಅಂದವಾದ ಬರವಣಿಗೆ, ಚಿತ್ರದ ಮೂಲಕ ಆಕರ್ಷಕವಾಗಿ ಕಾಣುವಂತೆ ಮಾಡುತ್ತಾರೆ. ಶಾಲೆಯಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮ, ಬೀಳ್ಕೊಡುವ ಸಮಾರಂಭ, ಸ್ವಾತಂತ್ರ್ಯೋತ್ಸವ ದಿನಾಚರಣೆ, ಗಣರಾಜ್ಯೋತ್ಸವ ದಿನಾಚರಣೆ ಇನ್ನೂ ಮುಂತಾದ ಕಾರ್ಯಕ್ರಮಗಳಲ್ಲಿ ಕಪ್ಪ ಹಲಗೆಯ ಮೇಲೆ ತಮ್ಮ ಚಿತ್ತಾಕರ್ಷಕವಾದ ಬರವಣಿಗೆ, ಚಿತ್ರಗಳಿಂದ ಚಂದವಾಗಿ ಕಾಣುವಂತೆ ಮಾಡುತ್ತಾರೆ. ಆಗಸ್ಟ ೧೫ ಹಾಗೂ ಜನೇವರಿ ೨೬ ರ ರಾಷ್ಟ್ರೀಯ ಹಬ್ಬಗಳ ದಿನದಂದು ರಂಗೋಲಿಯ ಪುಡಿಯಲ್ಲಿ ತ್ರಿವರ್ಣದ ಭಾರತ ನಕಾಶೆಯನ್ನು ಬಿಡಿಸುವ ಇವರ ಕಲೆಯನ್ನು ಎಲ್ಲರಿಗೂ ಮೆಚ್ಚುಗೆಯಾಗುವಂತಿರುತ್ತದೆ. ಶಾಲಾ ಕಾಂಪೌಂಡ ಗೋಡೆಯ ಮೇಲೆ ಜನಪದ ಶೈಲಿಯ ಚಿತ್ರಗಳು, ರೇಖಾ ಚಿತ್ರಗಳನ್ನು ಚಿತ್ರಿಸಿ ನೋಡುಗರ ಮನ ಸೆಳೆಯುವಂತೆ ಮಾಡುವುದರಲ್ಲಿ ನಿಪುಣರು.

ಬೆಂಗಳೂರಿನ ಕಲಾ ಗ್ಯಾಲರಿಗಳಿಗೆ ಭೇಟಿ ನೀಡುವುದರೊಂದಿಗೆ ವಿವಿಧ ಕಲಾವಿದರ ಕಲಾ ಶೈಲಿಯನ್ನು ಅಧ್ಯಯನ ಮಾಡಿದ್ದಾರೆ. ಲಲಿತ ಕಲಾ ಅಕಾಡೆಮಿಗೆ ಹೋಗಿ, ಅಲ್ಲಿಯ ರಾಜ್ಯದ ಪ್ರಸಿದ್ಧ ಕಲಾವಿದರ ಚಿತ್ರಗಳನ್ನು ಅಭ್ಯಸಿಸಿ, ಅಲ್ಲಿಯ ಗ್ರಂಥಾಲಯದಲ್ಲಿ ಸಮಕಾಲೀನ ಕಲೆಯ ಆಗು-ಹೋಗುಗಳನ್ನು ಕೂಲಂಕಷವಾಗಿ ಅಧ್ಯಯನದಲ್ಲಿ ತೊಡಗಿಕೊಂಡು, ನವ್ಯಕಲೆಯ ನವೀನ ಶೈಲಿ-ತಂತ್ರಗಳನ್ನು ಬಳಸುವ ವಿಧಾನಗಳನ್ನು, ಅಭಿವ್ಯಕ್ತಿಯನ್ನು ಆಳವಾಗಿ ಅರಿತುಕೊಂಡು, ಈ ದಿಕ್ಕಿನಲ್ಲಿ ಕಠಿಣ ಪ್ರಯೋಗಗಳನ್ನು ಮಾಡಿ ತಮ್ಮದೆಯಾದ ಶೈಲಿಯನ್ನು ಕಂಡುಕೊಳ್ಳುವಲ್ಲಿ ಸರೋದೆಯವರು ಯಶಸ್ವಿಯಾಗಿ ಮುನ್ನೆಡೆಸಿಕೊಂಡು ಹೊರಟ್ಟಿದ್ದಾರೆ. ಇವರ ಕಲಾಕೃತಿಗಳು ಜನಸಾಮಾನ್ಯರಿಗೂ ಅರ್ಥವಾಗುವಂತೆ ರಚಿಸಿದ್ದಾರೆ. ಇವರು ಬಳಸುವ ವಿಧಾನಗಳೆಂದರೆ ಟೆಂಕನಿಕ್, ಡೆಕಾರೇಟಿವ್ ಫಾರ್ಮ್, ಸೆಮಿ ಮಾರ್ಡನ್ ಶೈಲಿಯಲ್ಲಿ ವಿಭಿನ್ನವಾಗಿ, ವಿಶೇಷತೆಯನ್ನು ಹೊಂದಿವೆ. ಇವರ ಕಲಾಕೃತಿಗಳು, ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು, ಕರ್ನಾಟಕ

ವಿಶ್ವವಿದ್ಯಾಲಯ ಧಾರವಾಡ, ಬೀದರಿನ ಗುರುನಾನಕ್ ಟ್ರಸ್ಟ್, ಹುಬ್ಬಳ್ಳಿಯ ಸ್ವರ್ಣ ಜೂವೇಲರಿ, ದ ವ್ಯಾಲಿ ಸ್ಕೂಲ್ ಬೆಂಗಳೂರು, ಭಾರತೀಯ ಚಲನಚಿತ್ರ ನಿರ್ದೇಶಕರಾದ ಮಣಿರತ್ನಂ, ಪುನೀತ ರಾಜ್‌ಕುಮಾರ, ಇಲಕಲ್ಲ ನಗರದ ಹೋಟೆಲ್‌ಗಳಾ ಕಾಮತ್ ಮತ್ತು ಗಣೇಶಪ್ರಸಾದ ಹೋಟೆಲ್, ಪ್ರಫುಲ್ ಪಟೇಲ್‌ರವರ ಮನೆ, ವಿವಿಧ ಇಲಾಖೆಯ ಕಛೇರಿಗಳಲ್ಲಿ, ಗಣ್ಯಮಾನ್ಯರ ಮನೆಯಲ್ಲಿ; ಇವರ ರಚನೆಯ ಚಿತ್ರಪಟಗಳನ್ನು ಹಾಕಿ ತಮ್ಮ ಗೋಡೆಗಳನ್ನು ಅಲಂಕರಿಸುವುದರ ಜೊತೆಗೆ ಕಲೆ-ಕಲಾವಿದರಿಗೆ ಪ್ರೋತ್ಸಾಹಿಸುತ್ತಿದ್ದಾರೆ.

**ಕಲಾ ಪ್ರದರ್ಶನಗಳು** : ೨೦೦೩ ರಲ್ಲಿ ಹುಬ್ಬಳ್ಳಿ ಹಬ್ಬ, ೨೦೧೫ ಬೆಂಗಳೂರಿನ ಎಂ.ಜಿ.ರಸ್ತೆಯಲ್ಲಿರುವ ಮೆಟ್ರೋ ಕಲಾಕೇಂದ್ರ, ೨೦೧೬ರಲ್ಲಿ ಬೆಂಗಳೂರಿನ ಚಿತ್ರಕಲಾ ಪರಿಷತ್ತಿನಲ್ಲಿ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ ಮಾಡಿ ಕಲಾರಸಿಕರ ಮನತಣಿಸಿದ್ದಾರೆ. ಅಲ್ಲದೆ ಅರ್ಪಣಾ ಸಮೂಹ ಇಲಕಲ್ಲ, ಗುಜರಾತಿನ ಸೂರತ್ (೨೦೧೩), ಬದಾಮಿಯ ಚಾಲುಕ್ಯ ಉತ್ಸವದಲ್ಲಿ ಸಮೂಹ ಚಿತ್ರಕಲಾ ಪ್ರದರ್ಶನ ಮಾಡಿದ್ದಾರೆ. ಹಲವಾರು ಕಲಾಕ್ಯಾಂಪ್‌ಗಳನ್ನು ಏರ್ಪಡಿಸಿರುವ ಅವುಗಳಲ್ಲಿ ಪ್ರಮುಖವಾದವುಗಳೆಂದರೆ, ಧಾರವಾಡ ವಿಶ್ವವಿದ್ಯಾಲಯದ ಸುವರ್ಣ ಮಹೋತ್ಸವ (೧೯೯೯), ಬೆಳಗಾವಿಯ ಕಲಾಕ್ಯಾಂಪ್ (೨೦೦೩), ಚಾಲುಕ್ಯ ಉತ್ಸವ-ಬಾಗಲಕೋಟ(೨೦೦೭), ದ ವ್ಯಾಲಿ ಸ್ಕೂಲ್ ಬೆಂಗಳೂರಿನಲ್ಲಿ ಅಕಾಡೆಮಿ ಕ್ಯಾಂಪ್ (೨೦೧೦), ದಡ್ಡಿಕಮಲಾಪುರ-ಧಾರವಾಡದಲ್ಲಿ ನಡೆದ ಚಿತ್ರಕಲಾ ಶಿಕ್ಷಕರ ಕ್ಯಾಂಪ್ (೨೦೧೧), ಕೆ.ಕೆ.ಹೆಬ್ಬಾರ ಜನ್ಮಶತಮಾನೋತ್ಸವ ಕಾರ್ಯಗಾರ (೨೦೧೧), ಕನ್ನಡ ಮತ್ತು ಸಂಸ್ಕೃತಿ ಕಲಾಕ್ಯಾಂಪ್-ಕಲಾಗ್ರಾಮ ಬೆಂಗಳೂರು(೨೦೧೨), ಎಂ.ಪಿ.ಪ್ರಕಾಶ ಮೆಮೋರಿಯಲ್ ಕಲಾ ಕ್ಯಾಂಪ್-ಹರಪನಹಳ್ಳಿ(೨೦೧೨), ಚಾಲುಕ್ಯ ಉತ್ಸವ ಕಲಾಕ್ಯಾಂಪ್-ಬದಾಮಿ(೨೦೧೫), ಕರ್ನಾಟಕ ಲಲಿತಕಲಾ ಅಕಾಡೆಮಿ ಯುಗಾದಿ ಕಲಾಕ್ಯಾಂಪ್-ಇಲಕಲ್(೨೦೧೫), ಬೆಂಗಳೂರು ಕಲಾ ಫೌಂಡೇಶನ್ ಕಲಾಧಾನ (೨೦೧೫), ಕರ್ನಾಟಕ ಲಲಿತಕಲಾ ಅಕಾಡೆಮಿ ಕಥಾನಕ ಕಲಾಕ್ಯಾಂಪ್-ಬೀದರ (೨೦೧೬), ಕಿನ್ನಾಳ ಕಲಾಕ್ಯಾಂಪ್-ಇಲಕಲ್ಲ-(೨೦೧೬), ನ್ಯಾಷನಲ್ ಪೇಂಟರ್ಸ್ ಕ್ಯಾಂಪ್-ವಿಜಯಪುರ(೨೦೧೬).

**ಗೌರವ – ಪ್ರಶಸ್ತಿಗಳು** : ಚಂದ್ರಕಾಂತ ಸರೋದೆಯವರ ಕಲಾ ಸಾಧನೆಗೆ ಹಲವಾರು ಪ್ರಶಸ್ತಿ ಗೌರವಗಳು ಸಂದಿವೆ. ವರ್ಲ್ಡ್ ಹೆರಿಟೇಜ್ ವೀಕ್ ಪಟ್ಟದಕಲ್ಲು ಪ್ರಶಸ್ತಿ (೨೦೦೦),ಎಬಿವಿಪಿ ಬೆಂಗಳೂರು ಸಂಸ್ಥೆಯಿಂದ ಪ್ರಶಸ್ತಿ (೨೦೦೨), ಉತ್ತಮ ಚಿತ್ರಕಲಾ ಶಿಕ್ಷಕ ಪ್ರಶಸ್ತಿ (೨೦೦೨), ಬೀದರ ಜಿಲ್ಲೆಯಲ್ಲಿ ನಡೆದ, ಚಿತ್ರಕಲಾ ಶಿಕ್ಷಕರ ರಾಜ್ಯ ಮಟ್ಟದ ಸ್ಪರ್ಧೆಯ ಬಹುಮಾನ (೨೦೦೯), ಛಾಯಾಚಿತ್ರದಲ್ಲಿಯೂ ತಮ್ಮ ಛಾಪು ಮೂಡಿಸಿ ಅಲ್ಲಿಯೂ ಕೂಡ ರಾಜ್ಯ ಛಾಯಾಚಿತ್ರ ಬಹುಮಾನ (೨೦೧೬), ಬೆಂಗಳೂರಿನ ಆರ್ಟ್‌ಫೌಂಡೇಶನ್ ವತಿಯಿಂದ ಕಲಾಸಂಸ್ಕಾರ ಪ್ರಶಸ್ತಿ, ಕರ್ನಾಟಕ ಲಲಿತ ಕಲಾ ಅಕಾಡೆಮಿ ಪುರಸ್ಕಾರ (೨೦೧೭) ಇನ್ನು ಮುಂತಾದ ಗೌರವ-ಪ್ರಶಸ್ತಿಗಳು ಲಭಿಸಿವೆ.

ಆಯ್ದ ಶ್ರೇಷ್ಠ ಕಲಾ ಪ್ರದರ್ಶನದಲ್ಲಿಯೂ ಕೂಡ ಸರೋದೆಯವರ ಕಲಾಕೃತಿಗಳು ಆಯ್ಕೆಯಾಗಿ ಕಲಾಪ್ರೇಮಿಗಳ ಕಣ್ತುಂಬಿದ್ದಾರೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ, ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು (೨೦೦೦,೨೦೦೨,೨೦೦೩), ಎಬಿವಿಪಿ ಬೆಂಗಳೂರು (೧೯೯೯, ೨೦೦೦,೨೦೦೨), ಮೈಸೂರು ದಸರಾ (೧೯೯೯,೨೦೦೦), ಎಐಎಫ್‌ಎಸಿಎಸ್ ದೆಹಲಿ (೨೦೦೦), ಆಲ್ ಇಂಡಿಯಾ ಎಕ್ಸಿಬಿಷನ್-ಗುಲ್ಬರ್ಗಾ(೨೦೦೦, ೨೦೦೩), ೭ನೇ ಕರ್ನಾಟಕ ಕಲಾಮೇಳ-(೨೦೦೩), ೭೮ ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ-ಬಾಗಲಕೋಟ

ಇವರ ಕಲೆಯ ಕುರಿತು ಹಿರಿಯ ಕಲಾವಿದರಾದ ವಿಜಯ ಸಿಂಧೂರರವರು :

"ಚಂದ್ರಕಾಂತ ಸರೋದೆಯವರು ಬಾಗಲಕೋಟೆ ಜಿಲ್ಲೆಯ ಗ್ರಾನೈಟ್ ಮತ್ತು ಸೀರೆಗಳಿಗಾಗಿ ಅತೀ ಪ್ರಸಿದ್ಧಿ ಹೊಂದಿದ ಇಳಕಲ್ಲಿನ ಶ್ರೇಷ್ಠ ವರ್ಣಚಿತ್ರಕಾರರಾಗಿದ್ದಾರೆ.ಅವರು ಕಲಾಜಗತ್ತಿನಲ್ಲಿ ಅತ್ಯಂತ ಸೃಜನಾತ್ಮಕ ಹಾಗೂ ಹೊಸತನದಿಂದ ಕೂಡಿದ ವರ್ಣರಂಜಿತಚಿತ್ರಗಳನ್ನು ಹೊರತರುವಲ್ಲಿ ಹೆಸರುವಾಸಿಯಾಗಿದ್ದಾರೆ.ಅವರ ಚಿತ್ರಗಳು ಸುತ್ತಲಿನ ನಿಸರ್ಗ ಮತ್ತು ಆಕರ್ಷಕ ಸ್ಥಳಗಳನ್ನು ಸೆರೆಯುಡಿಯುವಲ್ಲಿ ಯಶಸ್ವಿಯಾಗಿವೆ.ಬಣ್ಣಬಣ್ಣದ ಚಿತ್ರಗಳು ವಿವಿಧತೆಯಿಂದ ಕೂಡಿ ನೋಡುಗರಿಗೆ ಮುದ ನೀಡುತ್ತವೆ. ಇತ್ತೀಚ್ಚಿನ ಚಿತ್ರಗಳಂತೂ ಹೆಣ್ಣು ಮಕ್ಕಳ ವಿಷಯಗಳ ಮೇಲೆ ಬಿಡಿಸಿದ್ದಾಗಿವೆ.ಅವು ಅತ್ಯಂತ ಆಕರ್ಷಕವಾಗಿಯೂ ಹಾಗೂ ವರ್ಣವಿನ್ಯಾಸದೊಂದಿಗೆ ಕೂಡಿ ಮನಸೂರೆಗೊಳ್ಳುತ್ತವೆ. ಅವರು ವೀಕ್ಷಕರಿಗೆ ಹೃದಯಸ್ಪರ್ಶಿಯಾದ ವರ್ಣಚಿತ್ರಗಳನ್ನು ಬಿಡಿಸುವುದರಲ್ಲಿ ನಿಸ್ಸೀಮರು.ಏಕವ್ಯಕ್ತಿ ಚಿತ್ರಗಳಂತೂ ಬಹುಸುಂದರವಾಗಿದ್ದು ಸಹೃದಯರ ಕಲಾ ಹಸಿವನ್ನು ಸಂಪೂರ್ಣ ಹಿಂಗಿಸುತ್ತವೆ'' ಎಂದು ಹೇಳಿದ್ದಾರೆ.

'ಒಂದು ಚಿತ್ರ ಸಾವಿರ ಶಬ್ದಗಳಿಗೆ ಸಮ' ಎಂಬ ಚೀನಿ ಗಾದೆಯಂತೆ ಸರೋದೆಯವರು ಚಿತ್ರಕಲಾ ಶಿಕ್ಷಕರಾಗಿ ಬಾಗಲಕೋಟ ಜಿಲ್ಲೆಯ ಹುನಗುಂದ ತಾಲೂಕಿನ ಚಿಕ್ಕ ಆದಾಪೂರ ಗ್ರಾಮದ ಸರಕಾರಿ ಪ್ರೌಢ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ತಮ್ಮ ವಿದ್ಯಾರ್ಥಿಗಳಲ್ಲಿ ಚಿತ್ರಕಲೆಯ ಆಸಕ್ತಿಯನ್ನು ಮೂಡಿಸುತ್ತಾ ಪ್ರೇರಣೆ-ಮಾರ್ಗದರ್ಶನ ನೀಡುತ್ತಾ ಪ್ರೋತ್ಸಾಹಿಸುತ್ತಿದ್ದಾರೆ. ಕಲೆಯಲಿ ನವೀನತೆಯ ಕಲಾ ಪ್ರಯೋಗ ಮಾಡುತ್ತಾ ಕಲಾ ಜಗತ್ತಿನಲ್ಲಿ ವಿಹರಿಸುತ್ತಿದ್ದಾರೆ. ಒಟ್ಟಿನಲ್ಲಿ ಇವರ ಕಲಾಪ್ರೇಮ ಹೀಗೆ ಮುಂದುವರೆದು ಸಾಧನೆಯ ಕಲಾಶಿಖರ ಏರಲೆಂದು ಆಶಿಸೋಣ.

ಚಂದ್ರಕಾಂತ.ದ.ಸರೋದೆಯವರಿಗೆ ನೀವು ಸಂಪರ್ಕಿಸಲು ಈ ಸಂಖ್ಯೆಗೆ ಕರೆ ಮಾಡಿ.